ದಿ: 20-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರಿದ ಪಾಟೀಸವಾಲು: ಶ್ರೀ ಎಮ್ ಎಮ್ ವಕೀಲರಿಂದ:-**

ನನ್ನ ತಂದೆ ಜೀವಂತವಾಗಿದ್ದಾರೆ. ನನ್ನ ತಂದೆಗೆ ಇಬ್ಬರು ಮಕ್ಕಳು ನಾನು ಮತ್ತು ನನ್ನ ಅಣ್ಣ ಸೋಮಶೇಖರ. ನನ್ನ ಅಣ್ಣ ಸೋಮಶೇಖರ ಜೀವಂತವಾಗಿದ್ದಾರೆ. ನನ್ನ ತಂದೆಯವರಿಗೆ ಹೆಣ್ಣು ಮಕ್ಕಳು ಇರುವುದಿಲ್ಲ. ದಾವಾ ಆಸ್ತಿ ನನ್ನ ತಾತನಿಗೆ ಸೇರಿದ್ದು ನನ್ನ ತಂದೆಗೆ ನನ್ನ ತಾತನಿಂದ ಆಸ್ತಿ ಬಂದಿರುತ್ತದೆ. ನನ್ನ ತಾತನ ಹೆಸರು ಬಾಲದಂಡ. ನನ್ನ ತಾತನಿಗೆ ಬೇರೆ ಬೇರೆ ಸರ್ವೆ ನಂಬರ್‌ನಲ್ಲಿ ಒಟ್ಟು 08 ಎಕರೆ 03 ಗುಂಟೆ ಆಸ್ತಿ ಇತ್ತು. ಚಿಂತಲಕುಂಟಾ ಗ್ರಾಮದ ಸರ್ವೆ ನಂಬರ್ 39 ರಲ್ಲಿ 06 ಎಕರೆ 03 ಗುಂಟೆ ಇದೆ, ಸರ್ವೆ ನಂಬರ್ 5 ರಲ್ಲಿ 02-00 ಎಕರೆ ಜಮೀನು ಇದೆ. ಸರ್ವೆ ನಂಬರ್ 39 ಮತ್ತು ಸರ್ವೆ ನಂಬರ್ 5 ರಲ್ಲಿ ಹಿಸ್ಸಾ ಗಳು ಏನೂ ಇಲ್ಲ. ಸರ್ವೆ ನಂಬರ್ 5 ರಲ್ಲಿ 03 ಜನರ ಪಟ್ಟಿ ಇದೆ. ಅವು ಒಂದೊಂದು 02-00 ಎಕರೆಯಂತೆ ಇರುತ್ತವೆ. ಸರ್ವೆ ನಂಬರ್ 39 ರಲ್ಲಿ ಎರಡು ಪಟ್ಟಿಗಳಿವೆ ನನ್ನದೊಂದು ಮತ್ತು ನನ್ನ 2 ನೇ ಅಣ್ಣತಮ್ಮಂದರದು ಇದೆ. ಅದು 06 ಎಕರೆ 03 ಗುಂಟೆ ಜಮೀನು ಇದೆ.

ನಾನು, ನನ್ನ ತಂದೆ ಮತ್ತು ನನ್ನ ಅಣ್ಣ ಭಾಗ ಮಾಡಿಕೊಂಡಿದ್ದೇವೆ. ಸರ್ವೆ ನಂಬರ್ 5 ರಲ್ಲಿ ನನ್ನ ಅಣ್ಣ ಭಾಗಕ್ಕೆ ಬಂದಿರುತ್ತದೆ. ಸರ್ವೆ ನಂಬರ್ 39 ರಲ್ಲಿ ಭಾಗ ಮಾಡಿಕೊಂಡಿರುವುದಿಲ್ಲ. ಸದರಿ ಸರ್ವೆ ನಂಬರ್ ನಲ್ಲಿ 02 ಎಕರೆ ನನ್ನ ಹೆಸರಿನಲ್ಲಿ, ನನ್ನ ತಂದೆಯವರ ಹೆಸರಿನಲ್ಲಿ ಉಳಿದ 04 ಎಕರೆ 03 ಗುಂಟೆ ಜಮೀನು ಇದೆ. ಪಹಣಿಯಲ್ಲಿ ಮಾತ್ರ ಹೆಸರು ಇದೆ ಆದರೆ ಸದರಿ ಸರ್ವೆ ನಂಬರ ನಲ್ಲಿ ನಾನು ನನ್ನ ತಂದೆ ಮತ್ತು ನನ್ನ ಅಣ್ಣ ಭಾಗ ಮಾಡಿಕೊಂಡಿರುವುದಿಲ್ಲ. ಅಂದರೆ ಇವತ್ತಿನವರೆಗೂ ಜಂಟಿಯಾಗಿದೆ ಎಂದರೆ ಸರಿ.

ಈ ದಾವೆಯನ್ನು ಸಾಹೇಬಗೌಡನ ಮಕ್ಕಳಾದ ಚಂದ್ರನಾಥ, ಬಸವರೆಡ್ಡಿ ತಿಮ್ಮಾರೆಡ್ಡಿ ಮತ್ತು ಕರೆಮ್ಮ ಇವರ ಮೇಲೆ ಜಮೀನು ಸರ್ವೆ ನಂಬರ್ 39 ನನ್ನ ಹೆಸರಿನಲ್ಲಿರುವ 02-00 ಎಕರೆಗೆ ದಾವೆ ಸಲ್ಲಿಸಿದ್ದೇನೆ. ಅವರು ಸದರಿ ಜಮೀನನ್ನು ನನ್ನ ತಂದೆಯವರಿಂದ ಖರೀದಿ ಮಾಡಿದ್ದೇವೆಂದು ಹೇಳುತ್ತಿದ್ದಾರೆ ಆದರೆ ನಾವು ಖರೀದಿಗೆ

ಕೊಟ್ಟಿರುವುದಿಲ್ಲ. ಖರೀದಿ ಬಗ್ಗೆ ನನ್ನ ತಂದೆಯವರಿಗೆ ನಾನು ಕೇಳಿದ್ದೇನೆ ಅವರು ಕೊಟ್ಟಿಲ್ಲ ಎಂದು ಹೇಳಿದ್ದಾರೆ. ನಿಮ್ಮ ವಾದ ಪತ್ರದಲ್ಲಿ ಮತ್ತು ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯವರು ದಾವಾ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ ಎಂದು ನಿನ್ನ ತಂದೆ ಖರೀದಿಗೆ ಕೊಟ್ಟಿರುವುದಿಲ್ಲ ಎಂದು ನಾನು ಅವರನ್ನು ಕೇಳಿದ್ದೆ ಇದೇ ಕಾರಣಕ್ಕೆ ದಾವೆ ಮಾಡಿದ್ದೇನೆಂದು ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿ ಬರೆಸಿದ್ದೇನೆ ಎನ್ನುತ್ತಾರೆ. ನನ್ನ ತಂದೆ ಮತ್ತು ನನ್ನ ಅಣ್ಣ ಕಾಗದ ಪತ್ರಕ್ಕೆ ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತಾರೆ. ನಿಮ್ಮ ತಂದೆ ಮತ್ತು ನಿಮ್ಮ ಅಣ್ಣ ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಾರೆ ಎಂದರೆ ಸಾಕ್ಷಿ ಇರಬಹುದು ಸಾಕ್ಷಿ ಮುಂದುವರಿದು ಅವರು ಆಂಗ್ಲ ಭಾಷೆಯಲ್ಲಿ ಸಹಿ ಮಾಡುವುದಿಲ್ಲ ಎನ್ನುತ್ತಾರೆ. ನನ್ನ ಹೆಸರಿಗೆ ದಾವಾ ಜಮೀನು ಮುಟೇಶನ್ ಆಗುವುದಕ್ಕೆ ನನ್ನ ತಂದೆ ದಾಖಲೆಗೆ ಸಹಿ ಮಾಡಿ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ನಿಮ್ಮ ತಂದೆ ಸಹಿ ಮಾಡಿದ ಒಪ್ಪಿಗೆ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲಾ ಎನ್ನುತ್ತಾರೆ. ನಿಮ್ಮ ಅಣ್ಣ ಸೋಮಶೇಖರ ಸಹ ನಿಮ್ಮ ಹೆಸರಿಗೆ ದಾವಾ ಜಮೀನು ಮುಟೇಶನ್ ಆಗುವುದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆಯೇ ಎಂದರೆ ಸಾಕ್ಷಿಯು ಸಹಿ ಮಾಡಿ ಒಪ್ಪಿಗೆ ಕೊಟ್ಟಿದ್ದಾರೆ ಎನ್ನುತ್ತಾರೆ. ನಿಮ್ಮ ಅಣ್ಣ ಸಹಿ ಮಾಡಿದ ಒಪ್ಪಿಗೆ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಎನ್ನುತ್ತಾರೆ.

ಕೋರಿಕೆಯ ಮೇರೆಗೆ ಮುಂದುವರಿದ ಪಾಟೀಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.
ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ